ಹತ್ತಿರವಿರುವ ಜನರ್ಯಾರು, ಅವರೆಲ್ಲಾ ಅವರೇ.

ಶ್ರೀ ಆರಗ ಜ್ಞಾನೇಂದ್ರ :— ಇವರಿಗೆ ಒಂದು ಪದ್ಧತಿ ಬೇಕಲ್ಲ, ಮಾನ್ಯ ಗೋವಿಂದೇಗೌಡರು ನಾನು ಯಾರನ್ನೂ ವರ್ಗಾವಣೆ ಮಾಡುವುದಿಲ್ಲವೆಂದು ಹೇಳಿದರು, ಈ ಬದ್ಧತೆಯಿಂದ ನಮ್ಮ ಹತ್ತಿರ ಯಾವ ಶಿಕ್ಷಕರು ಹುಡುಕಿಕೊಂಡು ಬರುವುದಿಲ್ಲ, ಹಾಗೆ ಒಬ್ಬ ಆರೋಗ್ಯ ಸಚಿವರು ಏತಕ್ಕೆ ಮಾಡುವುದಿಲ್ಲವೆಂದು ನಾನು ಕೇಳುವುದು. ಅವರ ಸೇವೆ ಬಡವರಿಗೆ ಸಿಗಬೇಕಲ್ಲ, ಇಲ್ಲದಿದ್ದರೆ ಏನು ಪ್ರಯೋಜನ.

ಅಧ್ಯಕ್ಷರು :— ಮಾನ್ಯ ಮಂತ್ರಿಗಳು ಈ ಸಭೆಗೆ ಬಂದಾಗ ಸ್ವಲ್ಪ ಜೋರಾಗಿ ಮಾತನಾಡಿ, ತಮಗೆ ಅವರಿಂದ ಉತ್ತರವನ್ನು ಕೊಡಿಸುತ್ತೇನೆ, ಮಾನ್ಯ ಚಂದ್ರಶೇಖರ ನಾಯಕ್‌ರವರೆ ನೀವು ಮಾತನಾಡಿ.

(ಏ) ವಿಷಯ ಗೋಕಾಕ್ ತಾಲ್ಲೂಕಿನ ಮಣ್ಣೂರು ಗ್ರಾಮದಲ್ಲಿ ವಿದ್ಯುತ್ ತಂತಿ ಕಟ್ಟಾಗಿ ಕಳಚಿಕೊಂಡು ಕೆಳಗೆ ಬಿದ್ದು, ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಯುವಕ ಮತ್ತು ಯುವತಿ ಮೃತಪಟ್ಟಿರುವುದು.

ಶ್ರೀ ಚಂದ್ರಶೇಖರ ಸದಾಶಿವನಾಯಕ್ (ಗೋಕಾಕ್) :— ಮಾನ್ಯ ಅಧ್ಯಕ್ಷರೆ, ದಿನಾಂಕ: 30-6-99 ರಂದು ಗೋಕಾಕ್ ತಾಲ್ಲೂಕಿನ ಮಣ್ಣೂರು ಗ್ರಾಮದಲ್ಲಿ ವಿದ್ಯುತ್ ತಂತಿ ಕಟ್ಟಾಗಿ ಕಳಚಿಕೊಂಡು ಕೆಳಗೆ ಬಿದ್ದು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಯುವಕ, ಯುವತಿ ಮೃತಪಟ್ಟಿದ್ದಾರೆ. ಆದರೆ ಆ ಯುವತಿಯ ಶವಸಂಸ್ಕಾರ ಮಾಡುವುದಕ್ಕೆ ಸಂಬಂಧಕರಿಗೆ ಗತಿಯಿಲ್ಲದಂಥ ಪರಿಸ್ಥಿತಿಯಲ್ಲಿ ವಿದ್ಯುತ್ ಇಲಾಖೆಯ ಹಿರಿಯ ಅಧಿಕಾರಿಗಳು ಬಂದು ನೋಡಿಕೊಂಡು ಹೋದರೂ ಇನ್ನು ಕೂಡ ಅವರಿಗೆ ಪರಿಹಾರವನ್ನು ಕೊಟ್ಟಿಲ್ಲ. ಇದರಲ್ಲಿ ನಮ್ಮ ಇಲಾಖೆಯದು ತಪ್ಪಾಗಿದೆ ಅವರಿಗೆ ಪರಿಹಾರ ಕೊಡುತ್ತೇವೆಂದು ಹೇಳಿ ಹೋಗಿದ್ದಾರೆಯೇ ಹೊರತು ಆಕೆಯ ಶವಸಂಸ್ಕಾರ ಮಾಡುವುದಕ್ಕೂ ಕೂಡ ವ್ಯವಸ್ಥೆ ಮಾಡಲಿಲ್ಲ. ಕೊನೆಗೆ ಮುನಿಸಿಪಾಲಿಟಿಯವರಿಂದ ಆಕೆಯ ಶವಸಂಸ್ಕಾರ ಮಾಡುವಂತಹ ಪರಿಸ್ಥಿತಿ ಬಂತು. ಆದುದರಿಂದ ಆ ರೈತ ಕಾರ್ಮಿಕ ಕುಟುಂಬದವರಿಗೆ ಯುವಕ ಹಾಗೂ ಯುವತಿಗೆ ಸಂಬಂಧಿಗಳ ಪರಿಹಾರವನ್ನು ಆದಷ್ಟು ಬೇಗ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಇಂಧನ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ಮಾನ್ಯ ಇಂಧನ ರಾಜ್ಯ ಸಚಿವರು) :— ಆ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಇವತ್ತೆ ನಾನು ತರಿಸಿಕೊಂಡು, ಅವರಿಗೆ ತೊಂದರೆಯಾಗಿರುವುದಕ್ಕೆ ನಮ್ಮ ಇಲಾಖೆಯಿಂದ ಅವರಿಗೇನು ಪರಿಹಾರ ಕೊಡಬೇಕು ಅದನ್ನು ಬೇಗ ಕೊಡಿಸುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಚಂದ್ರಶೇಖರ ಸದಾಶಿವ ನಾಯಕ್ :— ಮಾನ್ಯ ಅಧ್ಯಕ್ಷರೆ, ಅದಕ್ಕೆ ಏನು ಮಾಹಿತಿಗಳು ಬೇಕೊ ಅವನ್ನು ಈಗಾಗಲೇ ಕಳುಹಿಸಿಕೊಟ್ಟಿದ್ದಾರೆ, ಅದನ್ನು ನೋಡಿ ತಾವು ಹೆಚ್ಚಿನ ಯೋಗ್ಯ ಪರಿಹಾರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ :— ನಾನು ಅದನ್ನು ನೋಡಿ ಆದಷ್ಟು ಬೇಗ ಅವರಿಗೆ ಪರಿಹಾರವನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಸಗೀರ್ ಅಹಮದ್ :— ಅದಕ್ಕೆ ಬೇಕಾದಂತಹ ಮಾಹಿತಿ ತರಿಸಿಕೊಂಡು ಪರಿಹಾರ ಕೊಡುತ್ತೇವೆಂದು ಅವರು ಹೇಳುತ್ತಾರೆ, ಹಾಗೆ ಹೇಳಿದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :— ಕರ್ನಾಟಕ ಎಲೆಕ್ಟ್ರಿಕ್ ಸಿಟಿ ಬೋರ್ಡಿನವರು ಇಂಡಿಯನ್ ಎಲೆಕ್ಟ್ರಿಕ್ ಸಿಟಿ ಆಕ್ಟ್ ಕೆಳಗೆ ಅದಕ್ಕೆ ಪರಿಹಾರ ಕೊಡುತ್ತಾರೆ. ರೈತ ಸಂಜೀವಿನಿ ಎನ್ನುವುದಿರುವುದು ಎಪಿಎಂಸಿ ಆಕ್ಟ್ ಕೆಳಗೆ.

ಅಧ್ಯಕ್ಷರು :— 'ರೈತ ಸಂಜೀವಿನಿ' ಎನ್ನುವುದು ರೆಗ್ಯುಲೇಟರ್ ಮಾರ್ಕೇಟಿಗೆ ಸಂಬಂಧಿಸಿದ್ದು ಎಂದು ಮಾನ್ಯ ಪ್ರಕಾಶ್ ರವರು ಹೇಳಿದ್ದು.

ಶ್ರೀ ಎಂ.ಪಿ. ಪ್ರಕಾಶ್ :— ಈ 'ರೈತ ಸಂಜೀವಿನಿಯಲ್ಲಿ' 25 ಸಾವಿರ ರೂಪಾಯಿಗಳವರೆಗೆ ಪರಿಹಾರ ಕೊಡುತ್ತಾರೆ, ಇದಕ್ಕೂ ಅದಕ್ಕು ಸಂಬಂಧವಿಲ್ಲ.

ಶ್ರೀ ಸಗೀರ್ ಅಹಮ್ಮದ್ :— ಈಗ ಅದನ್ನು ಕೊಡುತ್ತಿಲ್ಲ; ಎಷ್ಟು ಪ್ರಕರಣಗಳಲ್ಲಿ ಆ ಪರಿಹಾರವನ್ನು ಕೊಟ್ಟಿದೆ ಎಂದು ಸರ್ಕಾರ ಹೇಳಬೇಕು.....

ಅಧ್ಯಕ್ಷರು :— ಇರಲಿ ಸ್ವಾಮಿ, ಸಮಯ ಹತ್ತಿರ ಬರುತ್ತಿದೆ ಎಲ್ಲಾ ಗೊತ್ತಾಗುತ್ತದೆ, ಮಾನ್ಯ ಸಭಾಪತಿಯವರೆ ನೀವು ಮಾತನಾಡಿ.

(ಐ) ಉಡುಪಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸುಮಾರು 3 ಸಾವಿರ ಕುಟುಂಬಗಳಿಗೆ ಹಕ್ಕುಪತ್ರ ಕೊಡುವುದರ ಬಗ್ಗೆ.

ಶ್ರೀ ಯು.ಆರ್. ಸಭಾಪತಿ (ಉಡುಪಿ ಕ್ಷೇತ್ರ) :— ಸನ್ಮಾನ್ಯ ಅಧ್ಯಕ್ಷರೇ, 29ನೇ ತಾರೀಖು ಉಡುಪಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸುಮಾರು ಮೂರು ಸಾವಿರ ಕುಟುಂಬಗಳಿಗೆ ಹಕ್ಕುಪತ್ರ ಕೊಡುವುದರ ಬಗ್ಗೆ ಇಲ್ಲಿ ನಾನು ಪ್ರಸ್ತಾಪಿಸಿದ್ದೆ, ಮಾನ್ಯ ಕಂದಾಯ ಸಚಿವರು ಎರಡು ತಿಂಗಳಗಳಲ್ಲಿ ಈ ಬಗ್ಗೆ ಒಂದು ವರದಿಯನ್ನು ಕೊಡುತ್ತೇನೆಂದು ಹೇಳಿದ್ದರು.

ಶ್ರೀ ವಿ. ಸೋಮಶೇಖರ್ (ಮಾನ್ಯ ಕಂದಾಯ ಸಚಿವರು) :— ನನ್ನಲ್ಲಿ ಉತ್ತರ ತಯಾರಿದೆ, ಅದಕ್ಕೆ ಮಧ್ಯಾಹ್ನ ನಾನು ಉತ್ತರ ಕೊಡುತ್ತೇನೆ.